ಅಹನಿಶಂ ಜಾಗರಣೀಯಂ ಲೋಕಹಿತಂ ಮಮ ಕರಣೀಯಂ

# ಪ್ರಂಗವ

ಪಾಕ್ಷಿಕ

ರಾಷ್ಟ್ರೀಯ ಜಾಗರಣ ಪತ್ರಿಕೆ



ಅನಿರೀಕ್ಷಿತವಾದ ಹೆಲಿಕಾಪ್ಟರ್ ಅಪಘಾತದಲ್ಲಿ ಹುತಾತ್ಮರಾದ ಸೇನಾಮಹಾದಂಡನಾಯಕರು, ಅವರ ಪತ್ನಿ ಮತ್ತು ಜೊತೆಗೆ ಪ್ರಾಣವನ್ನರ್ಪಿಸಿದ 12 ಯೋಧರಿಗೆ ಸಿಟಿಜನ್ಸ್ ಫಾರ್ ಡೆಮಾಕ್ರಸಿಯ ವತಿಯಿಂದ ಬೆಂಗಳೂರಿನ ಟೌನ್ ಹಾಲ್‌ನಲ್ಲಿ ಶ್ರದ್ಧಾಂಜಲಿ ಸಭೆ ನಡೆಯಿತು.

ಸಂಪುಟ : 43 ಸಂಚಿಕೆ : 10 ಪ್ಲವ – ಮಾರ್ಗಶಿರ ಕಲಿಯುಗಾಬ್ದ 5123 01-01-2022 ತ್ರೈವಾರ್ಷಿಕ : ರೂ. 150.00 ಬಿಡಿ ಪ್ರತಿ : ರೂ. 3.00 ಪುಟಗಳು : 4

# ಸಾವರ್ಕರರ ಅತಿ ಮಹತ್ತ್ವದ ಚಿಂತನೆ 'ದೇಶ ಮೊದಲು'

ಭಾರತ ಸರಕಾರದ ಕೇಂದ್ರ ಮಾಹಿತಿ ಆಯುಕ್ತರಾದ ಉದಯ್ ಮೆಹೂರ್ಕರ್ ಅವರ 'ಸಾವರ್ಕರ್ ದಿ ಮ್ಯಾನ್ ಹೂ ಕುಡ್ ಹ್ಯಾವ್ ಪ್ರಿವೆಂಟೆಡ್ ಪಾರ್ಟಿಶನ್' ಕೃತಿಯು ದೆಹಲಿ ಮತ್ತು ಬೆಂಗಳೂರಿನಲ್ಲಿ ಬಿಡುಗಡೆಯಾಗಿದೆ. ಇದಕ್ಕೆ ಪೂಜನೀಯ ಸರಸಂಘಚಾಲಕರಾದ ಶ್ರೀ ಮೋಹನ್ ಜೀ ಭಾಗವತ್ ಅವರ ಮುನ್ನುಡಿಯೂ ಇದೆ. ಅವರು ಬೆಂಗಳೂರಿಗೆ ಬಂದಾಗ ತನ್ಮಯೀ ಪ್ರೇಮಕುಮಾರ್ ಅವರೊಂದಿಗೆ ತಮ್ಮ ವಿಚಾರಗಳನ್ನು ಹಂಚಿಕೊಂಡಿದ್ದಾರೆ.



**1. ಸಾವರ್ಕರ್ ಬಗೆಗೆ, ಅವರ ದೂರದೃಷ್ಟಿ ಮತ್ತು ದೇಶ ವಿಭಜನೆಯ ಕುರಿತು ಈಗಾಗಲೇ ಅನೇಕ ಕೃತಿಗಳ ರಚನೆಯಾಗಿದೆ, ಆದರೆ ನೀವು ಸಾವರ್ಕರ್ ಅವರ ಕುರಿತಾಗಿ ಬರೆಯಲು ಪ್ರೇರಣೆ ಏನು?**

ಉ: ಕಳೆದ 25ವರ್ಷಗಳಿಂದಲೂ ಸಾವರ್ಕರ್ ಅವರ ವಿಚಾರಗಳ ಕುರಿತು ಬಹಳ ಆಸಕ್ತಿ ವಹಿಸಿ ಸಂಶೋಧನೆ ಮತ್ತು ಅಧ್ಯಯನದಲ್ಲಿ ತೊಡಗಿಕೊಂಡಿದ್ದೆ. ಎಡಪಂಥೀಯ ಮತ್ತು ಸ್ಯೂಡೋ ಸೆಕ್ಯುಲರ್ ರಾಜಕಾರಣಿಗಳು ಸಾವರ್ಕರರ ವಿರುದ್ಧ ಆರೋಪಗಳ ಸರಮಾಲೆಯನ್ನೇ ಮಾಡಿದಾಗ, ಸಾವರ್ಕರರ ಪರವಾಗಿ ಮಾತನಾಡುವ ರಾಷ್ಟ್ರೀಯವಾದಿಗಳು ಬಹತೇಕ ಬಾರಿ ಅವರ ಕ್ರಾಂತಿಕಾರಿ ಮುಖವನ್ನಷ್ಟೆ ಜಗತ್ತಿನೆದುರು ತೆರೆದಿಡುತ್ತಿದ್ದರು. ಆದರೆ ಸಾವರ್ಕರ್ ಕೇವಲ ಕ್ರಾಂತಿಕಾರಿ ಹೋರಾಟಗಾರರು ಮಾತ್ರವಲ್ಲ,ಭಾರತದ ಭದ್ರತೆ ಮತ್ತು ರಾಜತಾಂತ್ರಿಕ ಸಂಬಂಧಗಳ ಕುರಿತಾಗಿ ಬಹಳ ಉನ್ನತವಾದ ದೃಷ್ಟಿಕೋನವನ್ನು ಹೊಂದಿದ್ದವರು.ಅವರ ನಿಲುವುಗಳು ಸಾಕಾರಗೊಂಡಿದ್ದರು ಭಾರತ ಈ ಹೊತ್ತಿಗೆ ಸೂಪರ್ ಪವರ್ ಆಗಿ ಹೊರಹೊಮ್ಮುತ್ತಿತ್ತು. ಜತೆಗೆ ದೇಶ ವಿಭಜನೆಯನ್ನು ತಡೆಯಲು ಸಾವರ್ಕರರ ಪ್ರಯತ್ನಗಳು ಸ್ಮರಣೀಯವಾದುದು.ಅದಲ್ಲದೆ ಅವರ ಹಿಂದುತ್ವದ ಪ್ರತಿಪಾದನೆ ಅನ್ನುವಂಥದ್ದು ಬೇಷರತ್ ರಾಷ್ಟ್ರವಾದದ ಪ್ರತಿಪಾದನೆ ಎನ್ನುವುದು ನನ್ನ ಅಭಿಪ್ರಾಯ ಆದರೆ ಅವರ ಹಿಂದುತ್ವವನ್ನ ವಿಘಟನಕಾರಿಯೆಂದು ಬಿಂಬಿಸಲಾಗುತ್ತದೆ. ಹಾಗಾಗಿ ನಾನು ಮತ್ತು ನನ್ನ ಜತೆಗೆ ಚಿರಾಯು ಪಂಡಿತ್, ಈ ಪುಸ್ತಕ ಆರಂಭಿಸಿದೆವು.ಅಲ್ಲದೆ ಸಾವರ್ಕರರ ಮೇಲೆ ಮಾಡುತ್ತಿದ್ದ ಆರೋಪಗಳಿಗೆ ಮುಕ್ತಿ ನೀಡಿ, ಅವರ ಇತರ ಅನೇಕ ವಿಚಾರಗಳನ್ನು ಮುಂದಿಡುವ ಪ್ರಯತ್ನ ಮಾಡುತ್ತಿದ್ದೇವೆ.

**2. ನೀವು ಸಾವರ್ಕರರನ್ನ ಭಾರತದ ರಾಷ್ಟ್ರೀಯ ಭದ್ರತೆಯ ಪಿತಾಮಹ ಎಂದಿದ್ದೀರಿ, ಯಾಕೆ ಎನ್ನುವುದನ್ನ ವಿಸ್ತರಿಸಿ.**

ಉ: ಸಾವರ್ಕರರನ್ನ ರಾಷ್ಟ್ರೀಯ ಭದ್ರತೆಯ ಪಿತಾಮಹ ಎಂದಿರುವುದು ನನ್ನ ಬಹಳ ಸ್ಪಷ್ಟವಾದ ನಿಲುವು. 70/80ವರ್ಷಗಳ ಮೊದಲೇ ಭಾರತ ಪ್ರಸ್ತುತ ಎದುರಿಸುತ್ತಿರುವ ಅನೇಕ ಸಮಸ್ಯೆಗಳನ್ನು ಕರಾರುವಾಕ್ಕಾಗಿ ಹೇಳುತ್ತಾರೆ, ಅಲ್ಲದೆ ಚೀನಾ ಪಾಕಿಸ್ತಾನದ ಜೊತೆಗಿರುವ ನಮ್ಮ ತಿಕ್ಕಾಟಗಳು ಸಾಮಾಜಿಕ ಭಿನ್ನತೆ ಮತ್ತು ಆಂತರಿಕ ಭದ್ರತೆಯ ಕುರಿತಾಗಿಯೂ ಸವಿಸ್ತಾರವಾದ ವಾದಗಳನ್ನು ಮಂಡಿಸುತ್ತಾರೆ. ಉದಾಹರಣೆಗೆ ಅಸ್ಸಾಮಿನಲ್ಲಿ ಪೂರ್ವ ಬಂಗಾಲದ ಮುಸಲ್ಮಾನರ ಅಕ್ರಮ ವಲಸೆಗಳಿಂದಾಗುತ್ತಿದ್ದ ಸಮಸ್ಯೆಗಳನ್ನು 1941ರಲ್ಲೇ ಹೇಳುತ್ತಾರೆ, ಇಂಡೋ– ಚೈನಾ ಯುದ್ಧವನ್ನು 1954ರಲ್ಲೇ ಭವಿಷ್ಯ ನುಡಿದಿದ್ದರು. ಸ್ವಾತಂತ್ರ್ಯ ಪೂರ್ವದಲ್ಲೇ ಆಚಾರ್ಯ ಕೃಪಲಾನಿಯವರ ಬಳಿ ಮಾತನಾಡುತ್ತಾ ಪಾಕಿಸ್ತಾನವನ್ನು ಮುಸಲ್ಮಾನರಿಗಾಗಿ ನೀಡುವುದರಿಂದ ಭಾರತದ ಹಿಂದೂ–ಮುಸ್ಲಿಂ ಸಮಸ್ಯೆಗಳು ಬಗೆಹರಿಯುವುದಿಲ್ಲ ಎಂಬ ಎಚ್ಚರಿಕೆಯನ್ನು ನೀಡಿದ್ದರು ಅಲ್ಲದೆ ಪಾಕಿಸ್ತಾನವನ್ನು ಕೇಳುತ್ತಿರುವ, ಇಲ್ಲದಿದ್ದರೆ ಭಾರತದ ವಿರುದ್ಧ ಮುಸಲ್ಮಾನ ಜನತೆಯನ್ನ ಎತ್ತಿಕಟ್ಟುತ್ತಿದ್ದ ಅಂದಿನ ನಾಯಕರುಗಳು ಒಮ್ಮೆ ದೇಶವಾಗಿ ಅಸ್ತಿತ್ವಕ್ಕೆ ಬಂದು,ಕೈಯಲ್ಲಿ ಶಸ್ತ್ರಾಸ್ತ್ರಗಳು ಸಿಕ್ಕಾಗ ಪರಿಣಾಮಗಳು ಯಾವತ್ತೂ ಭಾರತದ ಪರವಾಗಿ ಇರಲು ಸಾಧ್ಯವಿಲ್ಲ ಎಂದಿದ್ದರು.ಅವರ ಎಚ್ಚರಿಕೆಯ ನುಡಿಗಳು ನಮ್ಮ ಸೈನಿಕರು, ಭಾರತದ ಜನರು ಪಾಕಿಸ್ತಾನದ ಕುಮ್ಮಕ್ಕಿನಿಂದ ನಡೆಯುವ ಚಟುವಟಿಕೆಗಳಿಂದ ಪ್ರಾಣ ಕಳೆದುಕೊಂಡಾಗ ಮನದಟ್ಟಾಗುತ್ತದೆ, ಮನಸ್ಸಿಗೆ ನೋವಾಗುತ್ತದೆ.

**3. ರಾಜತಾಂತ್ರಿಕ ಸಂಬಂಧಗಳ ಕುರಿತಾದ ಸಾವರ್ಕರರ ವಿಚಾರಗಳ ಮೂಲಭೂತ ಅಂಶಗಳು ಯಾವುವು?ಇವು ಇಂದಿನ ಮಲ್ಟಿ ಪೋಲಾರ್ ಜಗತ್ತಿಗೆ ಎಷ್ಟರಮಟ್ಟಿಗೆ ಪ್ರಸ್ತುತ?**

ಉ: ಸಾವರ್ಕರರ ರಾಜತಾಂತ್ರಿಕ ವಿಚಾರಗಳ ಮೂಲಭೂತ ಅಂಶವೆಂದರೆ ಯಾವುದೇ ಎರಡು ದೇಶಗಳು ಖಡಾಖಂಡಿತವಾಗಿ ಯಾವತ್ತಿಗೂ ಸ್ನೇಹಿತರೂ ವೈರಿಗಳೂ ಆಗಿರಲು ಸಾಧ್ಯವಿಲ್ಲ.ಏಕೆಂದರೆ ಆ ಎಲ್ಲ ಸಂಬಂಧಗಳು ಆಯಾ ದೇಶದ ಅಗತ್ಯತೆಗಳ ಮೇಲೆ ಅವಲಂಬಿತವಾಗಿರುತ್ತದೆ, ಮತ್ತು ನಮ್ಮ ಶತ್ರುಗಳ ಶತ್ರುಗಳನ್ನ ನಾವು ಮಿತ್ರನೆಂದೇ ಕರೆಯಬೇಕಾಗುತ್ತದೆ. ಪಂಡಿತ್ ನೆಹರುರವರು ತಮ್ಮ ಅಲಿಪ್ತ ನೀತಿಯಲ್ಲಿ ತೇಲಿ ಮುಳುಗುವಾಗ ಸಾವರ್ಕರರು ಬಹಳ ಸ್ಪಷ್ಟವಾಗಿ ಸಮರ್ಥವಾದ ರಾಜತಾಂತ್ರಿಕತೆ ಮತ್ತು ಸೇನೆಯ ಬಲಿಷ್ಠತೆ ಮಾತ್ರವೇ ಭಾರತವನ್ನು ಗಟ್ಟಿಯಾಗಿಸಬಲ್ಲದು ಎಂದಿದ್ದರು.ಸಾವರ್ಕರು ದೇಶದ ಸುರಕ್ಷತೆ ಮತ್ತು ಭದ್ರತೆಯ ಸಲುವಾಗಿ ಬಹಳ ನಿಖರವಾದ ಮತ್ತು ಆಳವಾದ ಒಳನೋಟವನ್ನು ಹೊಂದಿದ್ದರು.ಸೇನಾ ಸಾಮರ್ಥ್ಯ ಪ್ರತಿ ದೇಶದ ಮಹಾನತೆಯನ್ನು ನಿರ್ಧರಿಸುತ್ತದೆ ಎಂಬುದನ್ನ ನಂಬಿದ್ದವರು ಅವರು. ಸಾವರ್ಕರರ ಭದ್ರತೆಯ ಮತ್ತು ಸುರಕ್ಷತೆಯ ಕುರಿತಾದ ನಿಲುವುಗಳು ಸಾರ್ವಕಾಲಿಕವಾದುದು.ಅದು ಭೀಮನ ಬಲ ಮತ್ತು ಚಾಣಕ್ಯನ ತಂತ್ರದ ಆಧಾರದ ಮೇಲೆ ರೂಪಿತವಾಗಿದೆ

**4. ಸಾವರ್ಕರರ ಸುಭಾಷ್ ಚಂದ್ರ ಬೋಸರಿಗೆ ಆಕ್ಸಿಸ್ ದೇಶಗಳ ಜೊತೆಗೆ ಸೇರಲು ಪ್ರೇರಣೆ ನೀಡುತ್ತಾರೆ. ಅವರ ಈ ತಂತ್ರಗಾರಿಕೆ ಅವತ್ತಿನ ಮುಖ್ಯವಾಹಿನಿಯ ಸ್ವಾತಂತ್ರ್ಯ ಆಂದೋಲನದ ಮಟ್ಟಿಗೆ ಬಹಳ ಪಾಪುಲಿಸ್ಟ್ ಆದ ನಿಲುವೇನಾಗಿರಲಿಲ್ಲ. ಅವರ ಈ ನಿಲುವುಗಳ ಕುರಿತು ನಿಮ್ಮ ಅಭಿಪ್ರಾಯ ಏನು?**

ಉ: ಬಹುಶಃ ಸುಭಾಷ್ ಚಂದ್ರಬೋಸರು ಎರಡನೆಯ ಮಹಾಯುದ್ಧದ ಸಮಯದಲ್ಲಿ ಬ್ರಿಟಿಷರ ವಿರುದ್ಧ ಹೋರಾಡಲು ಜರ್ಮನಿ ಮತ್ತು ಜಪಾನ್ನ ಸಹಾಯ ತೆಗೆದುಕೊಂಡದ್ದು ಸಾವರ್ಕರರ ಪ್ರೇರಣೆಯಿಂದ ಎನ್ನುವುದು ತಪ್ಪಾಗುತ್ತದೆ.ಯಾಕೆಂದರೆ ಶತ್ರುವಿನ ಶತ್ರು ಮಿತ್ರ ಎನ್ನುವುದು ಪಾಪುಲಿಸ್ಟ್ ಆದುದಲ್ಲ. ಮತ್ತು ಅದಕ್ಕಿಂತಲೂ ಹೆಚ್ಚಾಗಿ ಕಾಂಗ್ರೆಸ್ಸಿನ ಪ್ರಾಪಗಾಂಡಾದ ಆಚೆಗೂ ಮಿಲಿಟರೀಕರಣದ ಕುರಿತಾಗಿ ಸಾರ್ವಜನಿಕರ ಬೆಂಬಲ ಬಹಳ ಹೆಚ್ಚಿತ್ತು. ಎರಡನೆಯ ಮಹಾಯುದ್ಧದ ಸಮಯದಲ್ಲಿ ಹಿಂದೂಗಳು ಬ್ರಿಟಿಷ್ ಸೇನೆಯನ್ನು ಸೇರಿ ಅಲ್ಲಿ ಮಿಲಿಟರಿ ಶಿಕ್ಷಣವನ್ನು ಪಡೆದುಕೊಂಡು ಮುಂದೆ ಸ್ವಾತಂತ್ರ್ಯ ನಂತರ ಭಾರತವನ್ನು ಸುರಕ್ಷಿತವಾಗಿಡಬೇಕು ಅನ್ನುವ ಸಾವರ್ಕರರ ನಿಲುವುಗಳು ಕೆಲವೇ ಜನರಿಗೆ ತಿಳಿದಿರುವಂಥದ್ದು, ಅಲ್ಲದೇಅದೊಂದು ಮಾಸ್ಟರ್ ಸ್ಟ್ರೋಕ್ ನಡೆ, ಅದರಿಂದ ಭಾರತಕ್ಕೆ ಬಹಳ ದೊಡ್ಡ ಮಟ್ಟದ ಲಾಭವಾಗಿದೆ.ಭಾರತದ ಸೇನಾ ಸಾಮರ್ಥ್ಯ ಕಡಿಮೆಯಾಗಿದ್ದರೆ ಜಮ್ಮು ಕಾಶ್ಮೀರದಂತೆ ಗುಜರಾತ್ ಮತ್ತು ರಾಜಸ್ಥಾನದಲ್ಲೂ ದಾಳಿಗೆ ಸಂಚು ನಡೆಯುತ್ತಿತ್ತು.

**5. ಸಾವರ್ಕರರ ಕುರಿತಾದ ಯಾವುದೇ ಚರ್ಚೆಗಳು ಗಾಂಧಿ –ಸಾವರ್ಕರರ ನಡುವಿನ ಬೈನರಿ ಚರ್ಚೆಯಾಗಿ ನಿಲ್ಲುತ್ತದೆ.ಈ ಕುರಿತಾದಂತೆ ನಿಮ್ಮ ನಿಲುವೇನು, ಇದನ್ನ ಸಾಮಾನ್ಯ ಭಾರತಿಯನೊಬ್ಬ ಹೇಗೆ ತೆಗೆದುಕೊಳ್ಳಬೇಕು? ಹೇಗೆ ಈ ಕುರಿತಂತೆ ನೋಡಬೇಕೆಂಬುದು ನಿಮ್ಮ ಅಪೇಕ್ಷೆ?**

ಉ: ಈ ನಿಟ್ಟಿನಲ್ಲಿ ಎರಡು ಮಾತಿಲ್ಲ ಯಾವುದೇ ಗೊಂದಲವೂ ಇಲ್ಲ. ಗಾಂಧೀಜಿಯವರ ಟ್ರಸ್ಟೀಶಿಪ್ ಅನ್ನುವಂತಹ ವಿಚಾರಗಳು ಇವತ್ತಿನ ಕಾರ್ಪೊರೇಟ್ ಸೋಷಿಯಲ್ ರೆಸ್ಪಾನ್ಸಿಬಿಲಿಟಿಯ (ಸಿಎಸ್‌ಆರ್)ನ ರೂಪದಲ್ಲಿ ಮತ್ತು ಅವರ ಗ್ರಾಮ ಸ್ವರಾಜ್ಯ, ಗ್ರಾಮಗಳನ್ನು ಸ್ವಾವಲಂಬಿಗಳನ್ನಾಗಿಸುವ ಆರ್ಥಿಕ ನೀತಿಗಳು ಇಂದಿಗೂ ಪ್ರಸ್ತುತ. ಆದರೆ ಯಾವುದೇ ಪ್ರಾಮಾಣಿಕ ಇತಿಹಾಸತಜ್ಞರು ಭಾರತದ ವಿಭಜನೆಯ ಕುರಿತಾಗಿ ಅವರ ನಿಲುವುಗಳನ್ನು , ಹಿಂದೂ ಮುಸ್ಲಿಂ ಐಕ್ಯತೆಯ ಹೆಸರಿನಲ್ಲಿ ಹಿಂದೂಗಳಿಗಿಂತ ಮುಸಲ್ಮಾನರ ಓಲಯಿಕೆ ಮಾಡಿದ್ದು ಮತ್ತು ಅದರ ಸಂಪೂರ್ಣ ಲಾಭವನ್ನು ಮುಸ್ಲಿಂ ಲೀಗ್ ಪಡೆದುಕೊಂಡಿದ್ದು ಅಥವಾ ಅವರ ಸಂಪೂರ್ಣ ಅಹಿಂಸೆಯ ತತ್ವಗಳಿರಬಹುದು ಇದನ್ನ ಸಮರ್ಥಿಸಲು ಸಾಧ್ಯವಿಲ್ಲ.

ಇನ್ನೊಂದೆಡೆ ಸಾವರ್ಕರರ ರಾಷ್ಟ್ರೀಯ ಭದ್ರತೆ ಮತ್ತು ರಾಜತಾಂತ್ರಿಕ ನೀತಿಗಳ ದೂರದೃಷ್ಟಿ ಭಾರತವನ್ನು ಒಡೆಯುವ ಶಕ್ತಿಗಳಿಂದ ಕಾಪಾಡುವ ನಿಟ್ಟಿನಲ್ಲಿ ಬಲಿಷ್ಠ ದೇಶವಾಗುವ ನಿಟ್ಟಿನಲ್ಲಿ ಪೂರಕವಾಗಿದ್ದವು.ಭಾರತದ ಸುರಕ್ಷತೆ ಮತ್ತು ಭದ್ರತೆಯ ದೃಷ್ಟಿಯಿಂದ ಮತ್ತು ವಿಭಜನೆಯ ವಿಚಾರದಲ್ಲಿ ಗಾಂಧೀಜಿಯವರು ಮತ್ತು ಸಾವರ್ಕರರ ನಿಲುವುಗಳ ಬಹಳ ಭಿನ್ನ ಸ್ತರದಲ್ಲಿದ್ದವು.ಹಾಗಾಗಿ ಬೈನರಿಯಾಗಿ ಕಾಣುವುದು ಸಹಜ.ಈ ಎಲ್ಲಾ ವೈಚಾರಿಕ ಭಿನ್ನತೆಯ ಆಚೆಗೂ ಅವರಿಬ್ಬರ ನಡುವೆ ದೇಶ ಹಿತದ ವಿಚಾರದಲ್ಲಿ ಮತ್ತು ವೈಯಕ್ತಿಕವಾಗಿ ಬಹಳ ಗೌರವದ ಭಾವನೆಯಿತ್ತು.

**6. ಸಾವರ್ಕರರ ಕಲ್ಪನೆಯ ಅಖಂಡ ಭಾರತದ ವಿಚಾರಗಳು ಇಂದಿಗೂ ಪ್ರಸ್ತುತವೇ? ಸ್ವಾತಂತ್ರ್ಯಾನಂತರದ ಇಷ್ಟೆಲ್ಲ ಘಟನಾವಳಿಗಳ ನಂತರವೂ, ಡೆಮಾಗ್ರಫಿಕ್ ಬದಲಾವಣೆಗಳ ನಂತರವೂ ಅಖಂಡ ಭಾರತದ ಕುರಿತಾಗಿ ಆಶಾವಾದವಿದೆಯೆ?**

ಉ: ಅಖಂಡ ಭಾರತದ ಕಲ್ಪನೆ ಈ ಎಲ್ಲ ಸವಾಲುಗಳ ಆಚೆಗೂ ಇಂದಿಗೂ ಬಹಳವೇ ಪ್ರಸ್ತುತವಾಗಿದೆ.

**7. ಒಟ್ಟಾರೆಯಾಗಿ, ಸಾವರ್ಕರರನ್ನ ಮತ್ತವರ ವಿಚಾರಗಳನ್ನು ಪ್ರಸ್ತುತ ಪರಿಸ್ಥಿತಿಯಲ್ಲಿ ಯುವಕರು ಹೇಗೆ ನೋಡಬೇಕು?ಸಾವರ್ಕರರ ಜೀವನದಿಂದ ಇಂದಿನ ಯುವಕರು ಕಲಿಯಬೇಕಾದ ಅಂಶಗಳೇನು?ಮೌಲ್ಯಗಳೇನು?**


ಉ: ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕರಾದ ಮಾನನೀಯ ಮೋಹನ್ ಭಾಗವತ್‌ಜೀವರು ಪುಸ್ತಕದ ಕುರಿತು ಮಾತನಾಡುತ್ತಾ ಭಾರತವನ್ನು ಮತ್ತೆ ಬಲಿಷ್ಠಗೊಳಿಸುವ ಸಲುವಾಗಿ ದೇಶವನ್ನು ಒಡೆಯುವ ಮನಸ್ಥಿತಿಯ ವಿರುದ್ಧ ಹೋರಾಡಲು ಒಂದು ದೀವಿಗೆಯಾಗಲಿದೆ ಎಂದಿದ್ದಾರೆ.ರಾಷ್ಟ್ರೀಯ ಭದ್ರತೆಯೆಂಬುದು ಇಂದು ಬಹಳ ಮಹತ್ತದ ವಿಚಾರ ಮತ್ತು ನಮ್ಮ ದೇಶದ ಯುವ ಪೀಳಿಗೆ ಈ ಕುರಿತಂತೆ ಸಾವರ್ಕರರ ದೃಷ್ಟಿಕೋನವನ್ನು ಕುರಿತು ತಿಳಿಯುವುದರಿಂದ ಭವಿಷ್ಯದ ದೃಷ್ಟಿಯಿಂದ ಸುರಕ್ಷತೆಯ ಕುರಿತು ಸ್ಪಷ್ಟವಾದ ನಿಲುವುಗಳು ಒಡಮೂಡುತ್ತದೆ.ಅಲ್ಲದೆ ಯುವಪೀಳಿಗೆ ಸಾವರ್ಕರರ ದೃಷ್ಟಿಯಿಂದ ನೈಜ ಇತಿಹಾಸದ ಪುಟಗಳನ್ನು ಅರಿಯಬೇಕಾಗಿದೆ. ಆದರೆ ಅದೆಲ್ಲದಕ್ಕಿಂತ ಮುಖ್ಯವಾಗಿ ಸಾವರ್ಕರರ ಅತಿ ಮಹತ್ವದ ಚಿಂತನೆ "ದೇಶ ಮೊದಲು" ಎನ್ನುವುದನ್ನ ಇವತ್ತಿನ ಯುವಜನತೆ ಹೃದ್ಗತಗೊಳಿಸಿಕೊಳ್ಳಬೇಕಾಗಿದೆ. ಅವರ ದೇಶ ಮೊದಲು ಎನ್ನುವ ಚಿಂತನೆಯನ್ನು ಯುವಜನತೆ ಅಳವಡಿಸಿಕೊಂಡಾಗ ಭಾರತ ಅನೂಹ್ಯವಾದ ಗತಿಯಲ್ಲಿ ಪ್ರಗತಿ ಕಾಣಲು ಸಾಧ್ಯವಾಗುತ್ತದೆ.



(ಪುಸ್ತಕದ ಲೇಖಕರು: ಉದಯ್ ಮೆಹೂರ್ಕರ್)

## ಸಂಸ್ಮರಣೆ

# ಭಗವಾನ್ ಶ್ರೀಧರ ಸ್ವಾಮಿಗಳು (7 ಡಿಸೆಂಬರ್ 1908–19 ಏಪ್ರಿಲ್ 1973)



ಭಗವಾನ್ ಶ್ರೀಧರ ಸ್ವಾಮಿಗಳ ಪೂರ್ವನಾಮ ಶ್ರೀಧರ್ ದೇಗ್ಲೂರ್ಕರ್. ಇವರ ಹುಟ್ಟೂರು ಕಲ್ಬುರ್ಗಿಯ ಲಾಡ್ ಚಿಂಚೋಳಿ. ಶ್ರೀಧರರು 1908ರ ಡಿಸೆಂಬರ್ 7ರಂದು ಕಮಲಾಬಾಯಿ ಮತ್ತು ನಾರಾಯಣರಾವ್ ದೇಗ್ಲೂರ್ಕರ್ ಅವರ ಐದನೆಯ ಪುತ್ರನಾಗಿ ಜನಿಸಿದರು. ಶ್ರೀಧರರಿಗೆ ಬಾಲ್ಯದಿಂದಲೇ ಹರಿಕಥಾ, ಕೀರ್ತನೆ, ಸತ್ಸಂಗ ಪುರಾಣ ಪ್ರವಚನಗಳಲ್ಲಿ ಗಾಢ ಅಭಿರುಚಿ ಮತ್ತು ಸನಾತನ ಧರ್ಮದಲ್ಲಿ ಅಚಲವಾದ ಶ್ರದ್ಧಾ, ಭಕ್ತಿ, ನಿಷ್ಠೆ.

ಶ್ರೀಧರರ 12ನೇ ವಯಸ್ಸಿನೊಳಗಾಗಿಯೇ ತಂದೆ,ಅಕ್ಕ, ತಾಯಿಯೂ ಕಾಲಕ್ಕೆ ತುತ್ತಾಗಿ ಶ್ರೀಧರರನ್ನು ಅಗಲಿದರು. ಶ್ರೀಧರರ ಬಾಲ್ಯ ಮತ್ತು ವಿದ್ಯಾಭ್ಯಾಸವು ಕಲ್ಬುರ್ಗಿಯ "ನೂತನ ವಿದ್ಯಾಲಯದಲ್ಲೂ ಅನಂತರ ಪುಣೆಯ "ಅನಾಥ ವಿದ್ಯಾರ್ಥಿ ಗೃಹ" ಹಾಗೂ "ಭಾವೆ ವಿದ್ಯಾಲಯ" ದಲ್ಲಿ ನಡೆಯಿತು. ಶ್ರೀಧರರಿಗೆ ದಿನದಿಂದ ದಿನಕ್ಕೆ ಆಧ್ಯಾತ್ಮದ ತುಡಿತ ಹೆಚ್ಚುತ್ತಿತ್ತು. ಸ್ವಭಾವತ: ಸಮಾಧಾನಿಯೂ ಶಾಂತನೂ ಆಗಿದ್ದ ಶ್ರೀಧರನಿಗೆ ರಾಮಭಕ್ತಿಯ ರಸರುಚಿಯ ಪರಿಚಯ ಎಳವೆಯಲ್ಲೇ ಆಗಿತ್ತು. ಈತನ ರಾಮ ಭಕ್ತಿಗೆ ನೀರೆರೆದು ಪೋಷಿಸಿದವರೇ ಅವರ ತಾಯಿ.

ಅಧ್ಯಾತ್ಮ ಪಥದಲ್ಲಿಯೇ ತನ್ನ ಜೀವನದ ಗುರಿ ಕಾಣುವ ಉತ್ಕಟ ಆಕಾಂಕ್ಷೆಯಿಂದ ಶ್ರೀಧರರು ಶ್ರೀ ಕ್ಷೇತ್ರ ಸಜ್ಜನಗಡಕ್ಕೆ ಪ್ರಯಾಣ ಬೆಳೆಸಿದರು. ಅಲ್ಲಿ ಕಡು ತಪಸ್ಸನ್ನಾಚರಿಸುತ್ತಿರಲು ಶ್ರೀ ಸಮರ್ಥ ರಾಮದಾಸರ ಪ್ರತ್ಯಕ್ಷ ದರ್ಶನವಾಗಿ ದಕ್ಷಿಣಕ್ಕೆ ತೆರಳುವಂತೆ ಅಪ್ಪಣೆಯನ್ನು ಪಡೆದರು. ಹೀಗೆ ಜಗತ್ತಿನ ಪ್ರಾಣಿಮಾತ್ರ ಗಳೆಲ್ಲವುಗಳ ಮುಕ್ತಿ ಮಾರ್ಗ ತೋರಿಸುವ ಭಗವಾನ್ ಶ್ರೀಧರನಾದರು.

ಸಜ್ಜನಗಢದಲ್ಲಿ ಎರಡೂವರೆ ವರ್ಷಗಳ ಕಾಲವಿದ್ದ ಭಗವಾನ್ ಶ್ರೀಧರರು ಗೋಕರ್ಣ, ಸಿರ್ಸಿ, ಶೀಗೆಹಳ್ಳಿಗೆ ಬಂದರು. ಅಲ್ಲಿ ಶ್ರೀ ಶಿವಾನಂದ ಸರಸ್ವತಿ ಸ್ವಾಮಿಗಳ ಸಹವಾಸದಲ್ಲಿ ಕೆಲಕಾಲವಿದ್ದು ನಂತರ ಸಾಗರ, ಕೊಡಚಾದ್ರಿ ಇತ್ಯಾದಿ ಕರ್ನಾಟಕದ ಹಲವು ಭಾಗಗಳನ್ನು ಸಂಚರಿಸಿದರು. ಅನಂತರ 1942ರ ವಿಜಯದಶಮಿಯಂದು ಶ್ರೀ ಶೀಗೆಹಳ್ಳಿಯಲ್ಲಿ ತುರ್ಯಾಶ್ರಮವನ್ನು ಹೊಂದಿದರು. ಮುಂದೆ ಚಿಕ್ಕಮಗಳೂರು, ಕಳಲೆ, ಮಂಗಳೂರು, ಕಾಶಿ, ಉತ್ತರಕಾಶಿ, ಕನ್ಯಾಕುಮಾರಿ, ಅಯೋಧ್ಯಾ, ಬದರಿಕಾಶ್ರಮ, ದ್ವಾರಕ, ಗಿರನಾರ್, ಕುರಗಡ್ಡೆ ಇತ್ಯಾದಿ ಅನೇಕ ಕಡೆ ಚಾತುರ್ಮಾಸ ಹಾಗೂ ವಾಸ್ತವ್ಯವನ್ನು ಮಾಡಿದರು. ಭಾರತಾದ್ಯಂತ ಸಂಚರಿಸಿ ಅಲ್ಲಿನ ದೇವಸ್ಥಾನ ಗುಡಿಗಳ ಜೀರ್ಣೋದ್ಧಾರ ಮಾಡಿದರು. ಪೇಟೆ-ಪಟ್ಟಣ, ಊರು-ಹಳ್ಳಿಗಳನ್ನು ಸಂಚರಿಸಿ ಭಕ್ತರಿಗೆ ದರ್ಶನವಿತ್ತು ಧರ್ಮ, ಭಕ್ತಿ, ಜ್ಞಾನ, ವೈರಾಗ್ಯವನ್ನು ಭೋಧಿಸಿದರು.

ಶ್ರೀಧರಸ್ವಾಮಿಗಳು ಕನ್ನಡ, ಮರಾಠಿ, ಸಂಸ್ಕೃತ, ಹಿಂದಿ ಮತ್ತು ಆಂಗ್ಲದಲ್ಲಿ ಪ್ರತಿಭಾನ್ವಿತ ಬರಹಗಾರರಾಗಿದ್ದರು. ತಮ್ಮ ವ್ಯಾಪಕ ಪ್ರವಾಸದುದ್ದಕ್ಕೂ ಅವರು ಸ್ವಲ್ಪ ಸಮಯವನ್ನು ಧಾರ್ಮಿಕ ಬರಹಗಳಿಗಾಗಿ ವಿನಿಯೋಗಿಸಿದರು. ಸಂಕೀರ್ಣವಾದ ವೇದಗಳ ಸೂಕ್ಷ್ಮ ತತ್ವಬೋಧಗಳನ್ನು ಸಾಮಾನ್ಯ ಜನರಿಗೆ ಮನನವಾಗುವ ರೀತಿಯಲ್ಲಿ ಸರಳಗೊಳಿಸುವುದು ಅವರ ಮುಖ್ಯ ಉದ್ದೇಶವಾಗಿತ್ತು. ಅವರು ಮರಾಠಿ, ಕನ್ನಡ ಮತ್ತು ಆಂಗ್ಲದಲ್ಲಿ ಇಪ್ಪತ್ತಕ್ಕಿಂತ ಹೆಚ್ಚು ಪುಸ್ತಕಗಳನ್ನು ಬರೆದರು.

ಒಮ್ಮೆ ಸಾಗರದ ಸಮೀಪದ ವರದಪುರ(ವರದಹಳ್ಳಿ) ಕ್ಷೇತ್ರಕ್ಕೆ ಶ್ರೀಗಳವರ ಆಗಮನವಾಯಿತು. ಶಾಂತ ರಮಣೀಯವಾಗಿರುವ ಈ ಸ್ಥಳದಲ್ಲಿ 1954ರಲ್ಲಿ ಒಂದು ಕುಟೀರ ನಿರ್ಮಾಣವಾಗಿ ಶ್ರೀಗಳವರ ಚಾತುರ್ಮಾಸ ಪ್ರಾರಂಭವಾಯಿತು.

ಭಗವಾನ್ ಶ್ರೀಧರ ಸ್ವಾಮಿಗಳ ಅನುಯಾಯಿಗಳು ದೇಶದಾದ್ಯಂತ ಇದ್ದಾರೆ. 1973ರ ಏಪ್ರಿಲ್ 19ರಂದು ಅವರು ತಮ್ಮ ಇಹಲೋಕ ಕರ್ತವ್ಯವನ್ನು ಪೂರ್ಣಗೊಳಿಸಿದರು. ಇಂದಿಗೂ ಸಾವಿರಾರು ಭಕ್ತರು ವರದಹಳ್ಳಿಯ ಶ್ರೀಧರ ಆಶ್ರಮಕ್ಕೆ ಭೇಟಿ ನೀಡುತ್ತಾರೆ. ವೇದಪಾಠಶಾಲೆಯಲ್ಲಿ ನೂರಾರು ವಿದ್ಯಾರ್ಥಿಗಳು ವೇದಾಧ್ಯಯನವನ್ನು ಮಾಡುತ್ತಿದ್ದಾರೆ.

## ಎಲ್ಲೋ ಕೇಳಿದ ಕಥೆ

ಅದೊಂದು ಪುರಾತನ ದೇಶ. ಆ ದೇಶದ ಮಹಾರಾಜನಿಗೆ ವಯಸ್ಸಾಗಿತ್ತು. ಸಾವಿನ ಭೀತಿಯೂ ಕಾಡುತ್ತಿತ್ತು. ಊರಿನ ಪ್ರಸಿದ್ಧ ಜ್ಯೋತಿಷಿಯನ್ನು ಅರಮನೆಗೆ ಕರೆದು ತನ್ನ ಜಾತಕವನ್ನು ಅವನ ಕೈಗಿತ್ತ.

ಚೆನ್ನಾಗಿ ವಿಮರ್ಶಿಸಿದ ನಂತರ ಜ್ಯೋತಿಷಿ ಹೀಗೆ ಹೇಳಿದ, ಮಹಾರಾಜರೇ ನಿಮ್ಮ ಕಣ್ಣೆದುರಿಗೇ ನಿಮ್ಮ ಬಂಧುಬಾಂಧವರೆಲ್ಲರೂ ನಿಧನರಾಗುತ್ತಾರೆ. ಅವರೆಲ್ಲರ ಅಂತಿಮ ಕಾರ್ಯಗಳನ್ನು ನೀವೇ ನೆರವೇರಿಸಬೇಕಾಗುತ್ತದೆ! ತಕ್ಷಣವೇ ರಾಜನಿಗೆ ಕೋಪ ಉಕ್ಕಿತು. ಸಾಕು ನಿನ್ನ ಒದರುವಿಕೆ. ಇಷ್ಟು ಬೊಗಳಲಿಕ್ಕೆ ಇಷ್ಟು ಹೊತ್ತು ನಾನು ಕಾಯಬೇಕಾಯಿತೇ? ಎಂದು ಕೂಗಿ ಸೇನಾಧಿಪತಿಯ ಬಳಿ ಈತನನ್ನು ಜೈಲಿಗೆ ಹಾಕುವಂತೆ ಕೂಗಿಬಿಟ್ಟ.

ಮರುವಾರ ಇನ್ನೊಬ್ಬ ಜ್ಯೋತಿಷಿಯನ್ನು ಕರೆಸಿ ತನ್ನ ಜಾತಕವನ್ನು ಕೊಟ್ಟ. ಈ ಹೊಸ ಜ್ಯೋತಿಷಿ ಮಹಾಸ್ವಾಮಿ, ನೀವು ದೀರ್ಘಾಯುಷಿಗಳು. ನಿಮ್ಮ ಜತೆಗಾರರೆಲ್ಲರಿಗಿಂತಲೂ ಜಾಸ್ತಿ ಬದುಕುವ ವೀರರು. ಹೀಗೆಂದಾಗಲೇ ರಾಜ ಉಬ್ಬಿ ಹೋದ. ಅವನಿಗೆ ಹೇರಳ ಬೆಲೆಬಾಳುವ ಉಡುಗೊರೆಯನ್ನು ನೀಡಿಬಿಟ್ಟ.


ಒಟ್ಟಿನಲ್ಲಿ ಕಹಿಯಾದ ಸತ್ಯವನ್ನು ನಿಷ್ಠುರವಾಗಿ ಮುಖಕ್ಕೆಸೆಯುವಂತೆ ಹೇಳದೆ ಮೃದುವಾಗಿ ಹೇಳುವುದೇ ವಿವೇಕ ಹಾಗೂ ಚುರುಕುಮತಿ. ಅದಿದ್ದರೆ ಸಾಕು. ಸಮರಸದ ಜೀವನ ನನಸಾಗದೇ ಇಲ್ಲ.

**ನೀತಿ:** ಒಂದೇ ಮಾತು ಹೇಳುವ ಪದ್ಧತಿ ಬೇರೆಬೇರೆಯಾಗಿ ವ್ಯಕ್ತಿಯ ಮೇಲೆ ಪ್ರಭಾವ ಬೀರುತ್ತದೆ. ಆದುದರಿಂದ ಎದುರಿಗಿರುವ ವ್ಯಕ್ತಿಯನ್ನು ಗಮನಿಸಿ ಕೆಟ್ಟದ್ದಾದರೂ ಒಳ್ಳೆಯ ರೀತಿಯಲ್ಲಿ ಹೇಳಿದರೆ ಜನರಲ್ಲಿ ಗೌರವ ಹೆಚ್ಚುವುದು.

## 370ನೇ ವಿಧಿ ರದ್ದಾದ ಬಳಿಕ ರೂ 31,000 ಕೋಟಿ ಹೂಡಿಕೆ ಪ್ರಸ್ತಾವನೆ ಸ್ವೀಕರಿಸಿದೆ ಜಮ್ಮು–ಕಾಶ್ಮೀರ

370ನೇ ವಿಧಿಯನ್ನು ರದ್ದುಪಡಿಸಿದ ನಂತರ ಜಮ್ಮು ಮತ್ತು ಕಾಶ್ಮೀರ ಆಡಳಿತವು ಇದುವರೆಗೆ ಸುಮಾರು 31,000 ಕೋಟಿ ರೂ.ಗಳ ಹೂಡಿಕೆ ಪ್ರಸ್ತಾವನೆಗಳನ್ನು ಸ್ವೀಕರಿಸಿದೆ ಎಂದು ಕೇಂದ್ರ ಗೃಹ ವ್ಯವಹಾರಗಳ ರಾಜ್ಯ ಸಚಿವ ನಿತ್ಯಾನಂದ ರಾಯ್ ಬುಧವಾರ ರಾಜ್ಯಸಭೆಗೆ ಲಿಖಿತ ಉತ್ತರದಲ್ಲಿ ತಿಳಿಸಿದ್ದಾರೆ. ಸಂಸದ ನಾರಾಯಣ ದಾಸ್ ಗುಪ್ತಾ ಅವರ ಪ್ರಶ್ನೆಗೆ ಲಿಖಿತ ಉತ್ತರ ನೀಡಿದ ಅವರು, ಜಮ್ಮು ಮತ್ತು ಕಾಶ್ಮೀರ ಕೇಂದ್ರಾಡಳಿತ ಪ್ರದೇಶದ ಕೈಗಾರಿಕಾ ಅಭಿವೃದ್ಧಿಗಾಗಿ ಸರ್ಕಾರವು ಫೆಬ್ರವರಿ 19, 2021 ರಂದು ಹೊಸ ಕೇಂದ್ರ ವಲಯದ ಯೋಜನೆಯನ್ನು ಅಧಿಸೂಚಿಸಿದೆ. ಇದು ಜಮ್ಮು ಮತ್ತು ಕಾಶ್ಮೀರದಲ್ಲಿ ಬಂಡವಾಳ ಹೂಡಿಕೆಯನ್ನು ಆಕರ್ಷಿಸುತ್ತದೆ ಎಂದು ಹೇಳಿದರು. ಇದು ಜಮ್ಮು ಮತ್ತು ಕಾಶ್ಮೀರ ಕೈಗಾರಿಕಾ ನೀತಿ, ಜಮ್ಮು ಮತ್ತು ಕಾಶ್ಮೀರ ಖಾಸಗಿ ಇಂಡಸ್ಟ್ರಿಯಲ್ ಎಸ್ಟೇಟ್ ಅಭಿವೃದ್ಧಿ ನೀತಿ ಮತ್ತು ಜಮ್ಮು ಮತ್ತು ಕಾಶ್ಮೀರ ಕೈಗಾರಿಕಾ ಭೂಮಿ ಹಂಚಿಕೆ ನೀತಿಗೆ ಪೂರಕವಾಗಿದೆ ಎಂದಿದ್ದಾರೆ.

## ಪುಸ್ತಕ ಪರಿಚಯ





ಪುಸ್ತಕದ ಹೆಸರು : 'ಉತ್ತುಂಗ' – ಕೃ. ಸೂರ್ಯನಾರಾಯಣರಾವ್ ಅವರ ಜೀವನ ಚಿತ್ರಣ
ಲೇಖಕರು : ಕೃಷ್ಣ ಪ್ರಸಾದ ಬದಿ
ಪ್ರಕಾಶಕರು : ಸಾಹಿತ್ಯ ಸಂಗಮ, ಬೆಂಗಳೂರು
ಬೆಲೆ : 200
ಪುಟಗಳು : viii + 236

ರಾಷ್ಟ್ರೀಯ ಸ್ವಯಂಸೇವಕ ಸಂಘದ ಜ್ಯೇಷ್ಠ ಪ್ರಚಾರಕರು ಕರ್ನಾಟಕದವರೇ ಆದ ಕರ.ಸೂರ್ಯನಾರಾಯಣರಾವ್ ಅವರ ಜೀವನ,ಕಾರ್ಯ ಮೌಲ್ಯಗಳ ಕುರಿತು ಬೆಳಕು ಚೆಲ್ಲುವ ಕೃತಿ ಉತ್ತುಂಗ.ತಮ್ಮ ಜೀವನದ ಎಲ್ಲ ಸಮಯವನ್ನೂ ರಾಷ್ಟ್ರೀಯ ಸ್ವಯಂಸೇವಕ ಸಂಘದ ಕಾರ್ಯಗಳಿಗಾಗಿ ಮೀಸಲಾಗಿರಿಸಿ, ತಮ್ಮನ್ನು ತಾವು ಸಮಾಜದ ಉನ್ನತಿಗಾಗಿ ತೇದುಕೊಂಡ ಮಹಾಚೇತನ ಶ್ರೀ ಕೃ.ಸೂರ್ಯನಾರಾಯಣ ರಾವ್ ಜೀಯವರು. ಎಲ್ಲರ ಬಾಯಲ್ಲಿ ಪ್ರೀತಿಯ ಸೂರೂಜಿ ಆಗಿದ್ದ ಅವರದ್ದು ಶುದ್ಧ ಸಾತ್ವಿಕ ಪ್ರೇಮದ ಅಂತಃಕರಣ ಎನ್ನುತ್ತಾರೆ ಲೇಖಕರಾದ ಕೃಷ್ಣಪ್ರಸಾದ ಬದಿ.

ಸೂರೂಜಿಯವರ ಜೀವನದ ಅನೇಕ ಪ್ರೇರಣಾದಾಯಿ ಘಟನೆಗಳನ್ನು, ಸೋಜಿಗದ ಸಂಗತಿಗಳನ್ನು ನಮ್ಮ ಮುಂದೆ ತೆರೆದಿಡುತ್ತಾರೆ.ಅವರ ಬದುಕಿನ ಅನೇಕ ಸ್ವಾರಸ್ಯಕರ ರಸಮಯ ಸನ್ನಿವೇಶಗಳು ಹಾಗು ಸಂಘಕಾರ್ಯದ ನಡುವಿನಲ್ಲಿ ಅವರು ಮಾಡಿದ ಅನೇಕ ಸಾಮಾಜಿಕ ಪ್ರಯೋಗಗಳ ಕುರಿತು ಬಿಚ್ಚಿಡುತ್ತಾರೆ. ಈ ಮೂಲಕ ಸೂರೂಜಿಯವರ ವ್ಯಕ್ತಿತ್ವವನ್ನು ಮುಂದಿನ ತಲೆಮಾರಿಗೆ ತಲುಪಿಸುವ ಪ್ರಯತ್ನವನ್ನು ನಡೆಸುತ್ತಾರೆ.

## ಹೆಣ್ಣಿನ ವಿವಾಹ ವಯಸ್ಸು 18 ರಿಂದ 21 ವರ್ಷಕ್ಕೆ ಹೆಚ್ಚಿಸುವ ಪ್ರಸ್ತಾಪಕ್ಕೆ ಕೇಂದ್ರ ಅಂಗೀಕಾರ



2020 ರ ಸ್ವಾತಂತ್ರ್ಯ ದಿನದ ಭಾಷಣದಲ್ಲಿ ಪ್ರಧಾನಿ ನರೇಂದ್ರ ಮೋದಿ ಅವರು ಮದುವೆಯಾಗಲು ಮಹಿಳೆಯರ ಕಾನೂನುಬದ್ಧ ವಯಸ್ಸನ್ನು ಹೆಚ್ಚಿಸುವ ಬಗ್ಗೆ ಸುಳಿವು ನೀಡಿದ್ದರು. ಸರ್ಕಾರವು ಹೆಣ್ಣುಮಕ್ಕಳು ಮತ್ತು ಸಹೋದರಿಯರ ಆರೋಗ್ಯದ ಬಗ್ಗೆನಿರಂತರವಾಗಿ ಕಾಳಜಿ ವಹಿಸುತ್ತಿದೆ. ಅಪೌಷ್ಟಿಕತೆಯಿಂದ ಮಹಿಳೆಯರನ್ನು ರಕ್ಷಿಸಲು ಅವರು ಸರಿಯಾದ ವಯಸ್ಸಿನಲ್ಲಿ ಮದುವೆಯಾಗುವುದು ಅವಶ್ಯಕ ಎಂದು ಹೇಳಿದ್ದರು.

ವರದಿಗಳ ಪ್ರಕಾರ, ಬುಧವಾರ ಕೇಂದ್ರ ಸಚಿವ ಸಂಪುಟವು ಮಹಿಳೆಯರ ಕಾನೂನುಬದ್ಧ ವಿವಾಹದ ವಯಸ್ಸನ್ನು 18 ರಿಂದ 21 ವರ್ಷಕ್ಕೆ ಹೆಚ್ಚಿಸುವ ಪ್ರಸ್ತಾಪವನ್ನು ಅಂಗೀಕರಿಸಿದೆ. ಈ ಪ್ರಸ್ತಾವನೆಯು ತಾಯ್ತನದ ಸರಿಯಾದ ವಯಸ್ಸು, ತಾಯಿಯ ಮರಣದ ಪ್ರಮಾಣ, ಪೌಷ್ಟಿಕಾಂಶದ ಮಟ್ಟಗಳ ಸುಧಾರಣೆ ಮತ್ತು ಸಂಬಂಧಿತ ಸಮಸ್ಯೆಗಳಿಗೆ ಸಂಬಂಧಿಸಿದ ವಿಷಯಗಳನ್ನು ಪರಿಶೀಲಿಸಲು ನೀತಿ ಆಯೋಗಕ್ಕೆ ಕಾರ್ಯಪಡೆಯು ಸಲ್ಲಿಸಿದ ಶಿಫಾರಸುಗಳನ್ನು ಆಧರಿಸಿದೆ.

ಸಂಪಾದಕೀಯ ಸಹಕಾರ: ಶೈಲೇಶ್ ಕುಲಕರ್ಣಿ, ಶ್ರೀವತ್ಸ ಶೃಂಗೇರಿ, ಸತ್ಯನಾರಾಯಣ ಶಾನಭಾಗ್, ರಾಧಾಕೃಷ್ಣ ಹೊಳ್ಳ, ತನ್ಮಯೀ ಪ್ರೇಮಕುಮಾರ್

# ಸಾಲುದ್ದದ ಸುದ್ದಿಗಳು


2017–18ರಲ್ಲಿ 0.2 ಬಿಲಿಯನ್ ಡಾಲರ್ಗಳಿದ್ದ ಮೊಬೈಲ್ ಫೋನ್ ರಫ್ತು ಈ ವರ್ಷದ ಸೆಪ್ಟೆಂಬರ್ ವೇಳೆಗೆ 1.7 ಶತಕೋಟಿ ಡಾಲರ್ಗೆ ಏರಿದೆ ಎಂದು ಸರ್ಕಾರ ಹೇಳಿದೆ. ಮೊಬೈಲ್ ಫೋನ್ಗಳ ಆಮದು 3.5 ಶತಕೋಟಿಯಿಂದ 0.5 ಶತಕೋಟಿ ಡಾಲರ್ಗೆ ಇಳಿದಿದೆ. ವಾಣಿಜ್ಯ ಮತ್ತು ಕೈಗಾರಿಕಾ ಖಾತೆ ರಾಜ್ಯ ಸಚಿವೆ ಅನುಪ್ರಿಯಾ ಪಟೇಲ್ ರಾಜ್ಯಸಭೆಯಲ್ಲಿ ಲಿಖಿತ ಉತ್ತರದಲ್ಲಿ ಈಬಗ್ಗೆ ಮಾಹಿತಿ ನೀಡಿದ್ದಾರೆ. ಎಲೆಕ್ಟ್ರಾನಿಕ್ಸ್ ರಾಷ್ಟ್ರೀಯ ನೀತಿ 2019ರ ಅಡಿಯಲ್ಲಿ, ಮೊಬೈಲ್ ಫೋನ್ಗಳು ಸೇರಿದಂತೆ ಎಲೆಕ್ಟ್ರಾನಿಕ್ಸ್ ಸರಕುಗಳ ದೇಶೀಯ ಉತ್ಪಾದನೆ ಮತ್ತು ರಫ್ತುಗಳನ್ನು ಹೆಚ್ಚಿಸಲು ಸರ್ಕಾರವು ಹಲವಾರು ಕ್ರಮಗಳನ್ನು ತೆಗೆದುಕೊಂಡಿದ್ದರ ಪರಿಣಾಮ ಇದಾಗಿದೆ.

ಈ ಹಣಕಾಸು ವರ್ಷದ ಮೊದಲ ಏಳು ತಿಂಗಳಲ್ಲಿ ಭಾರತದ ಅಕ್ಕಿ ರಫ್ತು ಶೇಕಡಾ 33 ರಷ್ಟು ಏರಿಕೆಯಾಗಿ 11.79 ಮಿಲಿಯನ್ ಟನ್ಗಳಿಗೆ ತಲುಪಿದೆ. ಪ್ರಸಕ್ತ ಹಣಕಾಸು ವರ್ಷದಲ್ಲಿ ಭಾರತದ ಅಕ್ಕಿ ರಫ್ತು 2020–21 ರಲ್ಲಿ ಸಾಧಿಸಿದ 17.72 ಮಿಲಿಯನ್ ಟನ್ಗಳ ದಾಖಲೆಯನ್ನು ಮೀರುವ ಸಾಧ್ಯತೆಯಿದೆ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯ ಹೇಳಿದೆ. ಆಫ್ರಿಕನ್, ಏಷ್ಯನ್ ಮತ್ತು ಯುರೋಪಿಯನ್ ಯೂನಿಯನ್ ಮಾರುಕಟ್ಟೆಗಳಲ್ಲಿ ಭಾರತವು ತನ್ನ ಅಕ್ಕಿ ರಫ್ತು ಹೆಜ್ಜೆಗುರುತನ್ನು ವಿಸ್ತರಿಸುವುದನ್ನು ಮುಂದುವರೆಸಿದೆ ಎಂದು ಸಚಿವಾಲಯ ಹೇಳಿದೆ. ದೃಢವಾದ ಜಾಗತಿಕ ಬೇಡಿಕೆಯು ಅಕ್ಕಿ ರಫ್ತಿನಲ್ಲಿ ಭಾರತದ ಬೆಳವಣಿಗೆಗೆ ಸಹಾಯ ಮಾಡಿದೆ ಎಂದು ಅದು ಹೇಳಿದೆ.



ಟ್ವಿಟರ್ನಲ್ಲಿ ಭೂತಾನ್ ಪ್ರಧಾನಿ ಲೋಟೆ ತ್ಶೆರಿಂಗ್ ಈ ಬಗ್ಗೆ ಪ್ರತಿಕ್ರಿಯೆ ನೀಡಿ, "ಅತ್ಯುನ್ನತ ನಾಗರಿಕ ಪ್ರಶಸ್ತಿ ನ್ಗಾಡಾಗ್ ಪೆಲ್ ಗಿ ಖೋರ್ಲೋಗಾಗಿ ಗೌರವಾನ್ವಿತ ಪ್ರಧಾನಿ ನರೇಂದ್ರ ಮೋದಿಯವರ ಹೆಸರನ್ನು ಘೋಷಣೆ ಮಾಡಿರುವುದು ತುಂಬಾ ಸಂತೋಷವಾಗಿದೆ" ಎಂದು ಹೇಳಿದ್ದಾರೆ. ಫೇಸ್ಬುಕ್ ಪೋಸ್ಟ್ ಮಾಡಿ "ವರ್ಷಗಳಿಂದ ಮತ್ತು ವಿಶೇಷವಾಗಿ ಸಾಂಕ್ರಾಮಿಕ ಸಮಯದಲ್ಲಿ ಮೋದಿ ಅವರು ಬೇಷರತ್ತಾದ ಸ್ನೇಹ ಮತ್ತು ಬೆಂಬಲವನ್ನು ನೀಡಿದ್ದಾರೆ. ಈ ಗೌರವಕ್ಕೆ ಅವರು ಹೆಚ್ಚು ಅರ್ಹರು! ಭೂತಾನ್ನ ಜನರಿಂದ ಅಭಿನಂದನೆಗಳು" ಎಂದಿದ್ದಾರೆ. "ಎಲ್ಲಾ ಸಂವಾದಗಳಲ್ಲಿ ನಿಮ್ಮ ಶ್ರೇಷ್ಠತೆಯನ್ನು ನಾನು ಕಂಡಿದ್ದೇನೆ, ಮೋದಿ ಆಧ್ಯಾತ್ಮಿಕ ಮಾನವ. ವೈಯಕ್ತಿಕವಾಗಿ ಈಗೌರವವನ್ನು ಸಂಭ್ರಮಿಸಲು ಎದುರು ನೋಡುತ್ತಿದ್ದೇನೆ" ಎಂದಿದ್ದಾರೆ. ಈಗಾಗಲೇ ಮೋದಿ ಹಲವು ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡಿದ್ದಾರೆ. ಇದೀಗ ಅವರು ಮುಡಿಗೆ ಮತ್ತೊಂದು ಗರಿಮೆ ಸಿಕ್ಕಂತಾಗಿದೆ.

2021–2023ರ ಅವಧಿಯಲ್ಲಿ ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡಲು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆ (ಇಸ್ರೋ) ನಾಲ್ಕು ದೇಶಗಳೊಂದಿಗೆ ಆರು ಒಪ್ಪಂದಗಳಿಗೆ ಸಹಿ ಹಾಕಿದೆ ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಗುರುವಾರ ಹೇಳಿದ್ದಾರೆ. ಈ ವಿದೇಶಿ ಉಪಗ್ರಹಗಳನ್ನು ವಾಣಿಜ್ಯ ಆಧಾರದ ಮೇಲೆ ಉಡಾವಣೆ ಮಾಡುವ ಮೂಲಕ ಸುಮಾರು 132 ಮಿಲಿಯನ್ ಯುರೋಗಳನ್ನು ಗಳಿಸಲಾಗುವುದು ಎಂದು ರಾಜ್ಯಸಭೆಯಲ್ಲಿ ಪ್ರಶ್ನೆಯೊಂದಕ್ಕೆ ಲಿಖಿತ ಉತ್ತರದಲ್ಲಿ ಸಿಂಗ್ ತಿಳಿಸಿದರು."ಇಸ್ರೋ ತನ್ನ ವಾಣಿಜ್ಯ ವಿಭಾಗವಾದ ನ್ಯೂ ಸ್ಪೇಸ್ ಇಂಡಿಯಾ ಲಿಮಿಟೆಡ್ (NSIL), ಬಾಹ್ಯಾಕಾಶ ಇಲಾಖೆ (DOS) ಅಡಿಯಲ್ಲಿ ಭಾರತ ಸರ್ಕಾರದ ಕಂಪನಿಯ ಮೂಲಕ ಇತರ ದೇಶಗಳಿಗೆ ಸೇರಿದ ಉಪಗ್ರಹಗಳನ್ನು ಪೋಲಾರ್ ಸ್ಯಾಟಲೈಟ್ ಲಾಂಚ್ ವೆಹಿಕಲ್ (PSLV) ನಲ್ಲಿ ವಾಣಿಜ್ಯಿಕವಾಗಿ ಉಡಾವಣೆ ಮಾಡುತ್ತಿದೆ" ಸಿಂಗ್ ಹೇಳಿದರು. 1999 ರಿಂದ ಇಲ್ಲಿಯವರೆಗೆ 34 ದೇಶಗಳಿಗೆ ಸೇರಿದ ಒಟ್ಟು 342 ವಿದೇಶಿ ಉಪಗ್ರಹಗಳನ್ನು ವಾಣಿಜ್ಯ ಆಧಾರದ ಮೇಲೆ ಪಿಎಸ್ಎಲ್ವಿಯಲ್ಲಿ ಯಶಸ್ವಿಯಾಗಿ ಉಡಾವಣೆ ಮಾಡಲಾಗಿದೆ ಎಂದು ತಿಳಿಸಿದರು.ಭಾರತೀಯ ಉಡಾವಣಾ ವಾಹನದಲ್ಲಿ ವಿದೇಶಿ ಉಪಗ್ರಹಗಳನ್ನು ಉಡಾವಣೆ ಮಾಡುವ ಮೂಲಕ, 2019 ರಿಂದ 2021 ರ ನಡುವಿನ ಕಳೆದ 3 ವರ್ಷಗಳಲ್ಲಿ ಭಾರತವು ಸರಿಸುಮಾರು 35 ಮಿಲಿಯನ್ USD ಮತ್ತು 10 ಮಿಲಿಯನ್ ಯುರೋಗಳಷ್ಟು ವಿದೇಶಿ ವಿನಿಮಯ ಆದಾಯವನ್ನು ಗಳಿಸಿದೆ ಎಂದು ಸಚಿವರು ಹೇಳಿದರು.



2030ರ ವೇಳೆಗೆ ಭಾರತ ತನ್ನದೇ ಆದ ಬಾಹ್ಯಾಕಾಶ ನಿಲ್ದಾಣವನ್ನು ಹೊಂದಲಿದೆ ಎಂದು ವಿಜ್ಞಾನ ಮತ್ತು ತಂತ್ರಜ್ಞಾನ ರಾಜ್ಯ ಸಚಿವ ಡಾ. ಜಿತೇಂದ್ರ ಸಿಂಗ್ ಹೇಳಿದ್ದಾರೆ. ರಾಜ್ಯಸಭೆಯಲ್ಲಿ ಪ್ರಶ್ನೋತ್ತರ ವೇಳೆಯಲ್ಲಿ ಉತ್ತರ ನೀಡಿದ ಅವರು, ಮೊದಲ ಮಾನವಸಹಿತ ಬಾಹ್ಯಾಕಾಶ ಯಾನ ಗಗನಯಾನ ಮಿಷನ್ ಅನ್ನು 2023 ರಲ್ಲಿ ನಿರೀಕ್ಷಿಸಲಾಗಿದೆ. ಮಿಷನ್ನ ಪೂರ್ವಗಾಮಿಯಾಗಿ ಮುಂದಿನ ವರ್ಷ ಮಾನವರಹಿತ ಹಾರಾಟವನ್ನು ನಡೆಸಲಾಗುವುದು ಮತ್ತು ಮುಂದಿನ ವರ್ಷದ ಅಂತ್ಯದ ವೇಳೆಗೆ ಮತ್ತೊಂದು ರೊಬೊಟಿಕ್ ಮಿಷನ್ ನಡೆಯಲಿದೆ ಎಂದಿದ್ದಾರೆ.

2020–21ರಲ್ಲಿ 81.97 ಶತಕೋಟಿ ಡಾಲರ್ಗಳ ಅತಿ ಹೆಚ್ಚು ವಾರ್ಷಿಕ ವಿದೇಶಿ ನೇರ ಹೂಡಿಕೆ (FDI) ಒಳಹರಿವನ್ನು ಭಾರತ ದಾಖಲಿಸಿದೆ. ವಾಣಿಜ್ಯ ಮತ್ತು ಕೈಗಾರಿಕಾ ಸಚಿವಾಲಯದ ಪ್ರಕಾರ, ಕಳೆದ ಏಳು ಹಣಕಾಸು ವರ್ಷಗಳಲ್ಲಿ ಎಫ್ಡಿಐ ಒಳಹರಿವು 440 ಶತಕೋಟಿ ಡಾಲರ್ಗಿಂತ ಹೆಚ್ಚಾಗಿದೆ, ಇದು ಕಳೆದ 21 ಹಣಕಾಸು ವರ್ಷಗಳಲ್ಲಿ ಒಟ್ಟು ಎಫ್ಡಿಐ ಒಳಹರಿವಿನ ಸುಮಾರು 58 ಪ್ರತಿಶತವಾಗಿದೆ. 2014 ರಿಂದ 2021 ರ ಅವಧಿಯಲ್ಲಿ ಎಫ್ಡಿಐ ಇಕ್ವಿಟಿ ಒಳಹರಿವು ಪಡೆದ ಟಾಪ್ 5 ದೇಶಗಳು ಸಿಂಗಾಪುರ್, ಮಾರಿಷಸ್, ಯುಎಸ್ಎ, ನೆದರ್ಲ್ಯಾಂಡ್ಸ್ ಮತ್ತು ಜಪಾನ್ ಎಂದು ಸಚಿವಾಲಯ ಹೇಳಿದೆ. ಕಂಪ್ಯೂಟರ್ ಸಾಫ್ಟ್ವೇರ್ ಮತ್ತು ಹಾರ್ಡ್ವೇರ್ ವಲಯವು ಎಫ್ಡಿಐ ಒಳಹರಿವಿನ ಅತಿದೊಡ್ಡ ಪಾಲನ್ನು ಆಕರ್ಷಿಸಿದೆ, ನಂತರ ಸೇವೆ, ವ್ಯಾಪಾರ ಮತ್ತು ದೂರಸಂಪರ್ಕ. ಭಾರತದಲ್ಲಿ ದೇಶೀಯ ಮತ್ತು ವಿದೇಶಿ ಹೂಡಿಕೆಗಳನ್ನು ಹೆಚ್ಚಿಸಲು ಸರ್ಕಾರವು ವಿವಿಧ ಕ್ರಮಗಳನ್ನು ಕೈಗೊಂಡಿದೆ ಎಂದು ಸಚಿವಾಲಯ ಹೇಳಿದೆ.

ಕರ್ನಾಟಕದಲ್ಲಿ ಶೀಘ್ರವೇ ಕ್ರೀಡಾ ವಿಶ್ವವಿದ್ಯಾನಿಲಯ ಸ್ಥಾಪನೆಯಾಗಲಿದೆ ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ಡಾ. ನಾರಾಯಣಗೌಡ ಹೇಳಿದ್ದಾರೆ. ವಿಧಾನ ಪರಿಷತ್ನ ಪ್ರಶ್ನೋತ್ತರ ಕಲಾಪದಲ್ಲಿ ಕೇಳಲಾದ ಪ್ರಶ್ನೆಗೆ ಅವರು ಉತ್ತರವಾಗಿ ಈ ಮಾಹಿತಿ ನೀಡಿದ್ದಾರೆ. ಕ್ರೀಡಾ ವಿಶ್ವವಿದ್ಯಾನಿಲಯ ಸ್ಥಾಪನೆ ನಿಟ್ಟಿನಲ್ಲಿ ಹಲವು ಪ್ರಕ್ರಿಯೆಗಳು ಚಾಲ್ತಿಯಲ್ಲಿದೆ ಎಂದು ಅವರು ಮಾಹಿತಿ ನೀಡಿದ್ದಾರೆ. ಕ್ರೀಡಾ ವಿಶ್ವವಿದ್ಯಾನಿಲಯ ಸ್ಥಾಪಿಸಲು ಸಲುವಾಗಿ ಕೇಂದ್ರ ಸರಕಾರ ಮತ್ತು ವಿಶ್ವವಿದ್ಯಾನಿಲಯಗಳಲ್ಲಿ ಚರ್ಚೆ ನಡೆಸಲಾಗುತ್ತಿದೆ.ಯಾವ ಸ್ಥಳದಲ್ಲಿ ಕ್ರೀಡಾ ವಿಶ್ವವಿದ್ಯಾಲಯ ಸ್ಥಾಪನೆಯಾಗಬೇಕು ಎಂಬ ಬಗ್ಗೆ ಇನ್ನೂ ನಿರ್ಧಾರ ತೆಗೆದುಕೊಂಡಿಲ್ಲ ಎಂದಿದ್ದಾರೆ.

2021–26ನೇ ಸಾಲಿಗೆ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅನುಷ್ಠಾನಕ್ಕೆ ಸಂಪುಟ ಅನುಮೋದನೆ ನೀಡಿದೆ. ಈ ಯೋಜನೆಯು 2.5 ಲಕ್ಷ ಪರಿಶಿಷ್ಟ ಜಾತಿ ಮತ್ತು ಎರಡು ಲಕ್ಷ ಪರಿಶಿಷ್ಟ ಪಂಗಡದ ರೈತರು ಸೇರಿದಂತೆ ಸುಮಾರು 22 ಲಕ್ಷ ರೈತರಿಗೆ ಪ್ರಯೋಜನವನ್ನು ನೀಡುತ್ತದೆ. ಮಾಹಿತಿ ಮತ್ತು ಪ್ರಸಾರ ಖಾತೆ ಸಚಿವ ಅನುರಾಗ್ ಠಾಕೂರ್, ಯೋಜನೆಗೆ 93 ಸಾವಿರ ಕೋಟಿರೂ ವ್ಯಯಿಸಲಾಗುತ್ತದೆ ಎಂದಿದ್ದಾರೆ. ಈ ನಿರ್ಧಾರವನ್ನು ಐತಿಹಾಸಿಕ ಎಂದು ಬಣ್ಣಿಸಿದ ಸಚಿವರು, 93,000 ಕೋಟಿ ರೂಪಾಯಿಗಳಲ್ಲಿ 37,456 ಕೋಟಿ ರೂಪಾಯಿಗಳನ್ನು ರಾಜ್ಯಗಳಿಗೆ ಕೇಂದ್ರವು ನೆರವಿನ ರೂಪದಲ್ಲಿ ನೀಡಲಿದೆ ಎಂದು ಹೇಳಿದರು.

142 GW ಉತ್ಪಾದನಾ ಸಾಮರ್ಥ್ಯವನ್ನು ಸೇರಿಸುವ ಮೂಲಕ ಸರ್ಕಾರವು ವಿದ್ಯುತ್ ಕ್ಷೇತ್ರದಲ್ಲಿ ಪರಿವರ್ತನೆ ತಂದಿದೆ ಎಂದು ಹೊಸ ಮತ್ತು ನವೀಕರಿಸಬಹುದಾದ ಇಂಧನ ಸಚಿವ ಆರ್ಕೆ ಸಿಂಗ್ ಅವರು ಹೇಳಿದ್ದಾರೆ. ಇಡೀ ದೇಶವನ್ನು ಒಂದೇ ಗ್ರಿಡ್ಗೆ ಜೋಡಿಸಲು ಮತ್ತು ಒಂದು ಗ್ರಿಡ್, ಒಂದು ಮಾರುಕಟ್ಟೆಯ ದೂರದೃಷ್ಟಿಯನ್ನು ಸಾಧಿಸಲು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂದು ಅವರು ಹೇಳಿದರು. ಭಾರತವು ಇಂಧನ ಕೊರತೆಯಿಂದ ಇಂಧನ ಹೆಚ್ಚುವರಿ ರಾಷ್ಟ್ರವಾಗಿ ಪರಿವರ್ತನೆಗೊಂಡಿದೆ, ಇತ್ತೀಚಿನ ವರ್ಷಗಳಲ್ಲಿ ಗ್ರಾಮಗಳ ವಿದ್ಯುದೀಕರಣ ಮತ್ತು ಮನೆಗಳಿಗೆ ವಿದ್ಯುತ್ ಸಂಪರ್ಕವನ್ನು ಒದಗಿಸುವಲ್ಲಿ ಭಾರತವು ಗಮನಾರ್ಹ ಪ್ರಗತಿಯನ್ನು ಸಾಧಿಸಿದೆ ಎಂದ ಅವರು, 2014 ಕ್ಕೆ ಹೋಲಿಸಿದರೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ವಿದ್ಯುತ್ ಲಭ್ಯತೆ ಗಣನೀಯವಾಗಿ ಹೆಚ್ಚಾಗಿದೆ ಎಂದಿದ್ದಾರೆ.

ಒಡಿಶಾದ ಚಂಡೀಪುರದ ಸಮಗ್ರ ಪರೀಕ್ಷಾ ಶ್ರೇಣಿಯಿಂದ ಅಗ್ನಿ ಶಾರ್ಟ್ ರೇಂಜ್ ಮೇಲ್ಮೈಯಿಂದ ವಾಯು ಕ್ಷಿಪಣಿಯನ್ನು ಯಶಸ್ವಿಯಾಗಿ ಪರೀಕ್ಷಿಸಲಾಗಿದೆ. ಡಿಫೆನ್ಸ್ ರಿಸರ್ಚ್ ಅಂಡ್ ಡೆವಲಪ್ಮೆಂಟ್ ಆರ್ಗನೈಸೇಶನ್(ಡಿಆರ್ಡಿಒ) ಈ ಬಗ್ಗೆಮಾಹಿತಿಯನ್ನು ನೀಡಿದ್ದು, ಅತ್ಯಂತ ಕಡಿಮೆ ಎತ್ತರದಲ್ಲಿ ಎಲೆಕ್ಟ್ರಾನಿಕ್ ಗುರಿಯ ವಿರುದ್ಧ ವರ್ಟಿಕಲ್ ಲಾಂಚರ್ನಿಂದ ಕ್ಷಿಪಣಿಯನ್ನು ಉಡಾವಣೆ ನಡೆಸಲಾಯಿತು ಎಂದಿದೆ.

ಸ್ಟಾಕ್ಹೋಮ್ ಇಂಟರ್ನ್ಯಾಶನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ನ ಹೊಸ ವರದಿಯ ಪ್ರಕಾರ, ಹಿಂದೂಸ್ತಾನ್ ಏರೋನಾಟಿಕ್ಸ್ ಲಿಮಿಟೆಡ್ (ಎಚ್ಎಎಲ್), ಇಂಡಿಯನ್ ಆರ್ಡನೆನ್ಸ್ ಫ್ಯಾಕ್ಟರಿ ಮತ್ತು ಭಾರತ್ ಎಲೆಕ್ಟ್ರಾನಿಕ್ಸ್ ಲಿಮಿಟೆಡ್(ಬಿಇಎಲ್) ಈ ಮೂರು ಭಾರತೀಯ ಕಂಪನಿಗಳು 2020 ರಲ್ಲಿ ಸಂಯೋಜಿತ ಶಸ್ತ್ರಾಸ್ತ್ರ ಮಾರಾಟದಲ್ಲಿ ವಿಶ್ವದ ಅಗ್ರ 100 ಸಂಸ್ಥೆಗಳಲ್ಲಿ ಸೇರಿವೆ. ಸ್ಟಾಕ್ಹೋಮ್ ಇಂಟರ್ನ್ಯಾಶನಲ್ ಪೀಸ್ ರಿಸರ್ಚ್ ಇನ್ಸ್ಟಿಟ್ಯೂಟ್ ಜಾಗತಿಕ ಶಸ್ತ್ರಾಸ್ತ್ರ ವ್ಯಾಪಾರವನ್ನು ಟ್ರ್ಯಾಕ್ ಮಾಡುತ್ತದೆ. ಎಚ್ಎಎಲ್ ಮತ್ತು ಇಂಡಿಯನ್ ಆರ್ಡನೆನ್ಸ್ ಫ್ಯಾಟರಿಗಳು ಕ್ರಮವಾಗಿ \$2.97 ಬಿಲಿಯನ್ ಮತ್ತು \$1.9 ಬಿಲಿಯನ್ ಮೌಲ್ಯದ ಮಾರಾಟದೊಂದಿಗೆ ಶ್ರೇಯಾಂಕದಲ್ಲಿ 42ನೇ ಮತ್ತು 60ನೇ ಸ್ಥಾನಗಳನ್ನು ಪಡೆದುಕೊಂಡಿವೆ. BEL 2020 ರಲ್ಲಿ \$1.63 ಬಿಲಿಯನ್ ಮೊತ್ತದ ಮಾರಾಟದೊಂದಿಗೆ 66 ನೇ ಸ್ಥಾನದನಲ್ಲಿದೆ.

Date of Publication 25th DECEMBER 2022

REGISTERED NEWS PAPER RNI 36528/79 LICENSE TO POST WITHOUT PREPAYMENT LICENSE NO PMG/BG/WPP-46/2021-2023 AT BENGALURU PSO BG-560 026 ON 10TH & 25TH OF EVERY MONTH. REG.NO.CPMG/KA/BGS/102/2021-23

FORTNIGHTLY 01-01-2022

पुंगव PUNGAVA

# 74, Ranga Rao Road, Shankarapuram,
Bangalore - 560 004. Ph: 70196 55632
email: editor.pungava@gmail.com
website : www.samvada.org
ತ್ರೈವಾರ್ಷಿಕ ಚಂದಾ : ರೂ. 150.00



## ಗಂಗಾ ಎಕ್ಸ್‌ಪ್ರೆಸ್ ವೇಗೆ ಶಂಕುಸ್ಥಾಪನೆ ನೆರವೇರಿಸಿದ ಮೋದಿ



ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ಶಹಜಹಾನ್ಪುರ ಜಿಲ್ಲೆಯಲ್ಲಿ ಅತೀ ಉದ್ದದ ಎಕ್ಸ್‌ಪ್ರೆಸ್ ಗಂಗಾ ಎಕ್ಸ್‌ಪ್ರೆಸ್ಗೆ ಶಂಕುಸ್ಥಾಪನೆ ಮಾಡಿದ್ದಾರೆ. ದೇಶದಾದ್ಯಂತ ವೇಗದ ಸಂಪರ್ಕವನ್ನು ಒದಗಿಸುವ ಪ್ರಧಾನಮಂತ್ರಿಯವರ ದೂರದೃಷ್ಟಿಯು ಎಕ್ಸ್‌ಪ್ರೆಸ್ವೇಯ ಹಿಂದಿನ ಸ್ಫೂರ್ತಿಯಾಗಿದೆ.

594 ಕಿಮೀ ಉದ್ದದ ಆರು ಪಥಗಳ ಎಕ್ಸ್‌ಪ್ರೆಸ್ವೇಯನ್ನು 36,200 ಕೋಟಿ ರೂಪಾಯಿ ವೆಚ್ಚದಲ್ಲಿ ನಿರ್ಮಿಸಲಾಗುತ್ತದೆ.ಮೀರತ್ನ ಬಿಜೌಲಿ ಗ್ರಾಮದ ಬಳಿ ಪ್ರಾರಂಭವಾಗುವ ಎಕ್ಸ್‌ಪ್ರೆಸ್ವೇ ಪ್ರಯಾಗ್ರಾಜ್ನ ಜುದಾಪುರ್ ದಂಡು ಗ್ರಾಮದವರೆಗೆ ವಿಸ್ತರಿಸುತ್ತದೆ. ಇದು ಮೀರತ್, ಹಾಪುರ್, ಬುಲಂದ್ಶಹರ್, ಅಮ್ರೋಹಾ, ಸಂಭಾಲ್, ಬುದೌನ್, ಶಹಜಹಾನ್ಪುರ, ಹರ್ದೋಯಿ, ಉನ್ನಾವೋ, ರಾಯ್ ಬರೇಲಿ, ಪ್ರತಾಪ್ಗಢ ಮತ್ತು ಪ್ರಯಾಗ್ರಾಜ್ ಜಿಲ್ಲೆಗಳ ಮೂಲಕ ಹಾದುಹೋಗುತ್ತದೆಎಕ್ಸ್ ಪ್ರೆಸ್ ವೇ ಉದ್ದಕ್ಕೂ ಕೈಗಾರಿಕಾ ಕಾರಿಡಾರ್ ನಿರ್ಮಿಸಲು ಉದ್ದೇಶಿಸಲಾಗಿದೆ. ಎಕ್ಸ್‌ಪ್ರೆಸ್ವೇ ಕೈಗಾರಿಕಾ ಅಭಿವೃದ್ಧಿ, ವ್ಯಾಪಾರ, ಕೃಷಿ ಮತ್ತು ಪ್ರವಾಸೋದ್ಯಮ ಸೇರಿದಂತೆ ಅನೇಕ ಕ್ಷೇತ್ರಗಳಿಗೆ ಪೂರಕವಾಗಿದೆ. ಇದು ಪ್ರದೇಶದ ಸಾಮಾಜಿಕ-ಆರ್ಥಿಕ ಅಭಿವೃದ್ಧಿಗೆ ದೊಡ್ಡ ಉತ್ತೇಜನವನ್ನು ನೀಡುತ್ತದೆ.

ಎಕ್ಸ್‌ಪ್ರೆಸ್ವೇಯಲ್ಲಿ ಏಳು ರೈಲ್ವೆ ಮೇಲ್ಸೇತುವೆ, 14 ದೊಡ್ಡ ಸೇತುವೆಗಳು, 126 ಸಣ್ಣ ಸೇತುವೆಗಳು, 375 ಅಂಡರ್ಪಾಸ್ಗಳು, 9 ಸಾರ್ವಜನಿಕ ಉಪಯುಕ್ತತೆ ಕೇಂದ್ರಗಳು, 2 ಟೋಲ್ ಪ್ಲಾಜಾ ಮತ್ತು 15 ರಾಂಪ್ ಟೋಲ್ ಪ್ಲಾಜಾವನ್ನು ಪ್ರಸ್ತಾಪಿಸಲಾಗಿದೆ. ಎಕ್ಸ್‌ಪ್ರೆಸ್ವೇಯಲ್ಲಿ 17 ಸ್ಥಳಗಳಲ್ಲಿ ಇಂಟರ್ಚೇಂಜ್ ಸೌಲಭ್ಯ ಲಭ್ಯವಿರುತ್ತದೆ. ಎಕ್ಸ್‌ಪ್ರೆಸ್ವೇಯ ಎರಡು ಬದಿಗಳಲ್ಲಿ 18.5 ಲಕ್ಷಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗುವುದು, ಇದು ಹೆಚ್ಚು ಹಸಿರು ನೋಟವನ್ನು ನೀಡುತ್ತದೆ ಎಂದು ಮೂಲಗಳು ತಿಳಿಸಿವೆ.

ಎಕ್ಸ್‌ಪ್ರೆಸ್ವೇ ಕೃಷಿ ಮತ್ತು ಡೈರಿ ಫಾರ್ಮ್ ಉತ್ಪನ್ನಗಳ ಉತ್ತಮ ಸಾಗಣೆಗೆ ಸಹಾಯ ಮಾಡುತ್ತದೆ.ರಾಜ್ಯ ಸರ್ಕಾರ ಈ ಮಹತ್ವಾಕಾಂಕ್ಷೆಯ ಯೋಜನೆಗೆ ತ್ವರಿತಗತಿಯಲ್ಲಿ ಕೆಲಸ ಮಾಡುತ್ತಿದೆ. ಎಕ್ಸ್‌ಪ್ರೆಸ್ವೇಗೆ ಅಗತ್ಯವಿರುವ 94 ಪ್ರತಿಶತದಷ್ಟು ಭೂಮಿಯನ್ನು ರಾಜ್ಯ ಸರ್ಕಾರ ಸ್ವಾಧೀನಪಡಿಸಿಕೊಂಡಿದೆ ಮತ್ತು ಕೋವಿಡ್ ಸಾಂಕ್ರಾಮಿಕದ ಹೊರತಾಗಿಯೂ ದಾಖಲೆಯ ನಾಲ್ಕು ತಿಂಗಳ ಅವಧಿಯಲ್ಲಿ 90 ಪ್ರತಿಶತದಷ್ಟು ಭೂಮಿ ಖರೀದಿ ಪೂರ್ಣಗೊಂಡಿದೆ.

## ವಿಶ್ವದಲ್ಲೇ ಅತಿ ಹೆಚ್ಚು ಮಹಿಳಾ ಪೈಲಟ್ಗಳನ್ನು ಹೊಂದಿದೆ ಭಾರತ



ಭಾರತದಲ್ಲಿ ಮಹಿಳಾ ಪೈಲಟ್ಗಳ ಪಾಲು ಶೇಕಡಾ 15 ರಷ್ಟಿದೆ, ಇದು ಅಂತರಾಷ್ಟ್ರೀಯ ಸರಾಸರಿ 5 ಶೇಕಡಾಕ್ಕಿಂತ ಹೆಚ್ಚು" ಎಂದು ಸರ್ಕಾರ ಹೇಳಿದೆ."ಇಜಿಸಿಎ (ಇ-ಗವರ್ನೆನ್ಸ್ ಫಾರ್ ಸಿವಿಲ್ ಏವಿಯೇಷನ್ ಮಾಹಿತಿಯ ಪ್ರಕಾರ, ಭಾರತದಲ್ಲಿ ನೋಂದಾಯಿತ 17,726 ಪೈಲಟ್ಗಳ ಪೈಕಿ ಮಹಿಳಾ ಪೈಲಟ್ಗಳ ಸಂಖ್ಯೆ 2,764 ಆಗಿದೆ" ಎಂದು ನಾಗರಿಕ ವಿಮಾನಯಾನ ಸಚಿವಾಲಯದ ಕೇಂದ್ರ ರಾಜ್ಯ ಸಚಿವ ಜನರಲ್ (ನಿವೃತ್ತ) ವಿಕೆ ಸಿಂಗ್ ರಾಜ್ಯಸಭೆಯಲ್ಲಿ ತಿಳಿಸಿದ್ದಾರೆ.

## ದಶಕಗಳ ಕನಸು ನನಸು: ಸರಯೂ ನಹಾರ್ ರಾಷ್ಟ್ರೀಯ ಯೋಜನೆ ಉದ್ಘಾಟಿಸಿದ ಮೋದಿ



ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ಪ್ರದೇಶದ ಬಲರಾಮ್ಪುರ ಜಿಲ್ಲೆಯಲ್ಲಿ ಸರಯು ನಹಾರ್ ರಾಷ್ಟ್ರೀಯ ಯೋಜನೆಯನ್ನು ಉದ್ಘಾಟಿಸಿದರು. ಈ ಯೋಜನೆಯು ಪೂರ್ವ ಉತ್ತರ ಪ್ರದೇಶದ ಒಂಬತ್ತು ಜಿಲ್ಲೆಗಳಲ್ಲಿ 14 ಲಕ್ಷ ಹೆಕ್ಟೇರ್ ಭೂಮಿಗೆ ನೀರಾವರಿಗೆ ಅನುಕೂಲವಾಗಲಿದೆ. ಈ ಯೋಜನೆಯು 6200 ಕ್ಕೂ ಹೆಚ್ಚು ಹಳ್ಳಿಗಳ ಸುಮಾರು 29 ಲಕ್ಷ ರೈತರಿಗೆ ಪ್ರಯೋಜನವನ್ನು ನೀಡುತ್ತದೆ. ಈ ಯೋಜನೆಯು 40 ವರ್ಷಗಳಿಂದ ಬಾಕಿ ಉಳಿದಿತ್ತು ಮತ್ತು 2014 ರಲ್ಲಿ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರು ಅಧಿಕಾರ ವಹಿಸಿಕೊಂಡ ನಂತರ ಅದರ ಕೆಲಸವು ತ್ವರಿತಗೊಂಡಿತು. ಈ ಯೋಜನೆಯು ದೇಶದ ಪ್ರಧಾನ ಮಂತ್ರಿ ಕೃಷಿ ಸಿಂಚಾಯಿ ಯೋಜನೆ ಅಡಿಯಲ್ಲಿ ಪೂರ್ಣಗೊಳ್ಳುವ 99 ಯೋಜನೆಗಳಲ್ಲಿ ಅತಿ ದೊಡ್ಡದಾಗಿದೆ.

ಸರಯು ನಹಾರ್ ರಾಷ್ಟ್ರೀಯ ಯೋಜನೆಯನ್ನು 1972ರಲ್ಲಿ ಯೋಜಿಸಲಾಗಿತ್ತು ಮತ್ತು ಅದರ ಕೆಲಸವು 1978ರಲ್ಲಿ ಪ್ರಾರಂಭವಾಯಿತು. ಆದರೆ ಬಜೆಟ್ ಬೆಂಬಲ ಮತ್ತು ಅಂತರ-ಇಲಾಖೆಯ ಸಮನ್ವಯದ ಕೊರತೆಯಿಂದಾಗಿ ಯೋಜನೆಯು ಹೆಚ್ಚಿನ ಪ್ರಗತಿಯನ್ನು ಸಾಧಿಸಲು ಸಾಧ್ಯವಾಗಲಿಲ್ಲ. ಆರಂಭದಲ್ಲಿ 1978ರಲ್ಲಿ ಎರಡು ಜಿಲ್ಲೆಗಳಿಗೆ ನೀರಾವರಿಗಾಗಿ 78 ಕೋಟಿ ರೂಪಾಯಿ ವೆಚ್ಚದಲ್ಲಿ ಸಣ್ಣ ಪ್ರಮಾಣದಲ್ಲಿ ಯೋಜನೆ ಪ್ರಾರಂಭವಾಯಿತು. ಆದರೆ ಈಗ ಅದನ್ನು ಒಂಬತ್ತು ಜಿಲ್ಲೆಗಳಿಗೆ ವಿಸ್ತರಿಸಲಾಗಿದೆ ಮತ್ತು ಯೋಜನೆಯ ಒಟ್ಟಾರೆ ವೆಚ್ಚ 9,800 ಕೋಟಿ ರೂಪಾಯಿಗಳಿಗೆ ಹೆಚ್ಚಾಗಿದೆ. ಈ ಯೋಜನೆಯನ್ನು ಉತ್ತರ ಪ್ರದೇಶದ ಅತಿದೊಡ್ಡ ನದಿ ಜೋಡಣೆ ಯೋಜನೆ ಎಂದು ಹೇಳಲಾಗಿದೆ. ಈ ಯೋಜನೆಯು ಬಹ್ರೈಚ್ನಲ್ಲಿರುವ ಸರಯು ಬ್ಯಾರೇಜ್ನಿಂದ ಪ್ರಾರಂಭವಾಗುತ್ತದೆ. ಮುಖ್ಯ ಕಾಲುವೆ 318 ಕಿಮೀ ಉದ್ದವಿದ್ದು, 6600 ಕಿಲೋಮೀಟರ್ ಉದ್ದದ 922 ಉಪ ಕಾಲುವೆಗಳನ್ನು ಇದಕ್ಕೆ ಜೋಡಿಸಲಾಗಿದೆ.

## ಕೋಲ್ಕತ್ತಾ ದುರ್ಗಾಪೂಜೆ ಯುನೆಸ್ಕೋದ ಅಮೂರ್ತ ಪರಂಪರೆಯ ಪಟ್ಟಿಗೆ



ಕೋಲ್ಕತ್ತಾದಲ್ಲಿ ಪ್ರತಿ ವರ್ಷ ಅಚರಿಸಲಾಗುವ ದುರ್ಗಾ ಪೂಜೆಯನ್ನು ಯುನೆಸ್ಕೋವು ಅಮೂರ್ತ ಪರಂಪರೆಯ ಪಟ್ಟಿಗೆ ಸೇರ್ಪಡೆಗೊಳಿಸಿದೆ. ಈ ಬಗ್ಗೆ ಟ್ವಿಟ್ ಮಾಡಿರುವ ಯುನೆಸ್ಕೋ, "ಅಭಿನಂದನೆಗಳು ಭಾರತ" ಎಂದಿದೆ. ಅದರ ಜೊತೆಗೆ ದೇವಿಯ ವಿಗ್ರಹವನ್ನು ಲಗತ್ತಿಸಿರುವ ಚಿತ್ರವನ್ನು ಪೋಸ್ಟ್ ಮಾಡಿದೆ. ಈ ಬಗ್ಗೆ ಮಾತನಾಡಿರುವ ಪಾರಂಪರಿಕ ಆಯೋಗದ ಅಧ್ಯಕ್ಷ ಸುವಪ್ರಸನ್ನ, ದುರ್ಗಾ ಪೂಜೆಯ ಮಂಟಪಗಳ ತಯಾರಿಕೆಯಲ್ಲಿನ ಕುಶಲತೆಯನ್ನು ಪ್ರದರ್ಶಿಸುವ ರೆಡ್ ರೋಡ್ ಕಾರ್ನಿವಲ್ ಪ್ರಪಂಚದಾದ್ಯಂತದ ಹೆಚ್ಚಿನ ಜನರಿಗೆ ಭವ್ಯತೆಯ ಬಗ್ಗೆ ಅರಿವು ಮೂಡಿಸಿದೆ ಎಂದಿದೆ.

ಮೋದಿ ಟ್ವಿಟ್ ಮಾಡಿ, ಪ್ರತಿಯೊಬ್ಬ ಭಾರತೀಯನಿಗೂ ಅತ್ಯಂತ ಹೆಮ್ಮೆ ಮತ್ತು ಸಂತೋಷದ ವಿಷಯ! ದುರ್ಗಾ ಪೂಜೆಯು ನಮ್ಮ ಉತ್ತಮ ಸಂಪ್ರದಾಯಗಳು ಮತ್ತು ನೀತಿಗಳನ್ನು ಎತ್ತಿ ತೋರಿಸುತ್ತದೆ ಮತ್ತು ಕೋಲ್ಕತ್ತಾದ ದುರ್ಗಾಪೂಜೆಯು ಪ್ರತಿಯೊಬ್ಬರೂ ಪಡೆಯಬೇಕಾದ ಅನುಭವವಾಗಿದೆ ಎಂದಿದ್ದಾರೆ.

## ಇಸ್ಲಾಂ ತೊರೆಯುವುದಾಗಿ ಘೋಷಿಸಿದ ಮಲಯಾಳಂ ನಿರ್ದೇಶಕ ಅಲಿ ಅಕ್ಬರ್



ರಕ್ಷಣಾ ಪಡೆಗಳ ಮುಖ್ಯಸ್ಥ ಬಿಪಿನ್ ರಾವತ್ ಅವರ ಸಾವಿನ ಬಗ್ಗೆ ಕೆಲ ಮತಾಂಧರು ಸಾಮಾಜಿಕ ಜಾಲತಾಣಗಳಲ್ಲಿ ಸಂಭ್ರಮ ವ್ಯಕ್ತಪಡಿಸಿ ಪೋಸ್ಟ್ಗಳನ್ನು ಹಾಕಿದ್ದರು. ಈ ಘಟನೆಯಿಂದ ಮನನೊಂದಿರುವ ಮಲಯಾಳಂನ ನಿರ್ದೇಶಕ ಅಲಿ ಅಕ್ಬರ್ ಅವರು ಇಸ್ಲಾಂ ಅನ್ನು ತೊರೆಯುವುದಾಗಿ ಘೋಷಣೆ ಮಾಡಿದ್ದಾರೆ. ಅವರು, "ಇಂದಿನಿಂದ ನಾನು ಮುಸ್ಲಿಂ ಅಲ್ಲ, ನಾನೊಬ್ಬ ಭಾರತೀಯ, ಇಂದು, ನಾನು ಹುಟ್ಟಿನಿಂದ ಪಡೆದ ಹೊದಿಕೆಯನ್ನು ಎಸೆಯುತ್ತಿದ್ದೇನೆ" ಎಂದಿದ್ದಾರೆ. ವರದಿಗಳ ಪ್ರಕಾರ ಅವರು ಹಿಂದೂ ಧರ್ಮವನ್ನು ಸ್ವೀಕರಿಸಿದ ಅವರು ತಮ್ಮ ಹೆಸರನ್ನು ನರಸಿಂಹನ್ ಎಂದು ಬದಲಾಯಿಸಿಕೊಳ್ಳಲಿದ್ದಾರೆ.ಅವರ ಪತ್ನಿಯೂ ಹಿಂದೂ ಧರ್ಮ ಸ್ವೀಕರಿಸಲಿದ್ದಾರೆ. ತನ್ನ ಇಬ್ಬರು ಮಕ್ಕಳಿಗೆ ಧರ್ಮ ಬದಲಾಯಿಸಲು ಸ್ವೀಕರಿಸಲು ಒತ್ತಾಯಿಸುವುದಿಲ್ಲ, ಅವರ ಇಷ್ಟದಂತೆ ಅವರು ಇರಬಹುದು ಎಂದು ಅವರು ಹೇಳಿದ್ದಾರೆ.

ಬಿಪಿನ್ ರಾವತ್ ಅವರ ಸಾವಿನ ಬಗ್ಗೆ ಸಾಮಾಜಿಕ ಮಾಧ್ಯಮಗಳಲ್ಲಿ ಮಾಡಲಾದ ಪೋಸ್ಟ್ ಬಗ್ಗೆ ಯಾವುದೇ ಮುಸ್ಲಿಂ ಧರ್ಮಗುರುಗಳು ಖಂಡನೆ ವ್ಯಕ್ತಪಡಿಸದ ಬಗ್ಗೆ ಕೂಡ ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

**ಓದುಗರೇ ಗಮನಿಸಿ**

ಪುಂಗವದ ಹೊಸ ಚಂದಾದಾರರಾಗಲು ಮತ್ತು ಚಂದಾ ನವೀಕರಣ ಮಾಡುವವರು ಕೆಳಗಿನ ವಿಳಾಸಕ್ಕೆ ಸಂಪರ್ಕಿಸಿ:
ಪುಂಗವ, #74, ರಂಗರಾವ್ ರಸ್ತೆ, ಶಂಕರಪುರಂ, ಬೆಂಗಳೂರು-560 004. ಮೊಬೈಲ್: 97391 83021

ಸಂಪಾದಕ-ಪ್ರಕಾಶಕ : ಕಾ.ಶ್ರೀ. ನಾಗರಾಜ, # 74, ರಂಗರಾವ್ ರಸ್ತೆ, ಬೆಂಗಳೂರು-04. ಸಂಪಾದಕೀಯ : ಮೊ. 97312 64009 ಮುದ್ರಕರು : ರಾಷ್ಟ್ರೋತ್ಥಾನ ಮುದ್ರಣಾಲಯ, ಬೆಂಗಳೂರು-18.